**'ಹಾಯ್.'**

ಹೊಸ ಸಂಖ್ಯೆಯಿಂದ ಮೆಸೇಜ್.

ಯಾರಿರಬಹುದು?

ಅಷ್ಟರಲ್ಲೇ ಇನ್ನೊಂದು ಮೆಸೇಜ್.

'ಮೆರೂನ್ ಕುರ್ತಾದಲ್ಲಿ ರಾಜಕುಮಾರನ ಹಾಗಿದ್ದೀಯ.'

ಯಾರೋ ಇಲ್ಲಿಯವರೇ... ನನ್ನ ಪರಿಚಯವಿರಬಹುದು, ಆದರೆ ನನಗೆ ಪರಿಚಯವಿಲ್ಲ.

'ಹೂ ಈಸ್ ದಿಸ್?' ನನ್ನ ಕುತೂಹಲ ಹೊರಬಿತ್ತು.

'ನಿನ್ನಿಂದ ನಾಲ್ಕನೇ ಸಾಲು.'

ನಾನು ಕುಳಿತಿದ್ದು ಎರಡನೇ ಸಾಲು... ನನ್ನ ಹಿಂದಿನ ಸಾಲುಗಳು... ಬಲಕ್ಕೆ ಕತ್ತು ತಿರುಗಿಸಿದೆ, ನಾಲ್ಕನೇ ಸಾಲಿನಲ್ಲಿ ಮೂವರು ಕುಳಿತಿದ್ದಾರೆ. ಮೊದಲೆರಡು ಕುರ್ಚಿಗಳಲ್ಲಿ, ವಯಸ್ಸಾದ ಹೆಂಗಸರು,

